एचएलएल लाइफ़केयर लिमिटेड
(भारत सरकार का उद्यम)
(पूर्व हिंदुस्तान लैटेक्स लिमिटेड)

HLL Lifecare Limited
(A Government of India Enterprise)
(formerly Hindustan Latex Limited)

# ಹೆಚ್‌ಎಲ್‌ಎಲ್ – ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಂದ ಪ್ರತೀಕ್ಷಾ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನ – 2024–25

**ಬೆಳಗಾವಿ :** ಹೆಚ್ ಎಲ್ ಎಲ್ ಲೈಫ್‌ಕೇರ್ ಲಿಮಿಟೆಡ್‌ನ ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿ 2024–25 ಶೈಕ್ಷಣಿಕ ವರ್ಷದಲ್ಲಿ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಪ್ರವೇಶ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರತಿಕ್ಷಾ ಚಾರಿಟೇಬಲ್ ಸೊಸೈಟಿಯು BPL ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ ಎಲ್ ಎಲ್ ಸಂಸ್ಥೆಯ ಸಾಮಾಜಿಕ ಜವಾಬ್ದಾರಿ (CSR) ಕಾರ್ಯಕ್ರಮಗಳ ಒಂದು ಭಾಗವಾಗಿದೆ.

ಮುಖ್ಯವಾಗಿ ಈ ಯೋಜನೆಯು ಬೆಳಗಾವಿ ಜಿಲ್ಲೆಯ ಕರ್ನಾಟಕದ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಅಧ್ಯಯನ ಮಾಡುವ ಇಂಜನೀರಿಂಗ್, ಮೆಡಿಸಿನ್ (ಎಮ್‌ಬಿಬಿಎಸ್), ಬಿ ಫಾರ್ಮಾ, ಡಿಪ್ಲೋಮಾ, ನರ್ಸಿಂಗ್ ಮತ್ತು ಐಟಿಐ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ನೀಡುತ್ತದೆ.

| **ಬೆಳಗಾವಿ ಜಿಲ್ಲಾ ವಿಭಾಗದ ವಿದ್ಯಾರ್ಥಿಗಳಿಗಾಗಿ** | | | | | | |
|---|---|---|---|---|---|---|
| ಕೋರ್ಸ್ | ಎಮ್‌ಬಿಬಿಎಸ್ | ಬಿಫಾರ್ಮಾಸಿ | ಇಂಜನೀಯರಿಂಗ | ಡಿಪ್ಲೋಮಾ | ನರ್ಸಿಂಗ | ಐಟಿಐ |
| ವಿದ್ಯಾರ್ಥಿಗಳ ಸಂಖ್ಯೆ | 5 | 5 | 5 | 5 | 5 | 5 |
| ತಲಾ ವಿದ್ಯಾರ್ಥಿ ವೇತನ ಹಣ | 40,000/–MBBS<br>25,000/– BDS,BHMS,BAMS | 25000/– | 20000/– | 15000/– | 15000/– | 5000/– |

ಆಯ್ದ ಐದು ಎಮ್‌ಬಿಬಿಎಸ್ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.40,000/–, ಅರ್ಹ ಎಮ್‌ಬಿಬಿಎಸ್ ವಿದ್ಯಾರ್ಥಿಗಳು ಕೊರತೆ ಯಾದರೆ ಆ ಜಾಗದಲ್ಲಿ ಬಿಡಿಎಸ್, ಬಿಎಚ್‌ಎಮ್‌ಎಸ್, ಬಿಎಎಮ್‌ಎಸ್ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುವುದು ಹಾಗೂ ಅವರಿಗೆ ವಾರ್ಷಿಕ ತಲಾ ರೂ.25000/ ವಿದ್ಯಾರ್ಥಿ ವೇತನ ನಿಡಲಾಗುವುದು, ಬಿಫಾರ್ಮಾಸಿ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.25,000/– ಇಂಜನೀಯರಿಂಗ್ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.20,000/– ಮತ್ತು ಮತ್ತು ಡಿಪ್ಲೋಮಾ, ನರ್ಸಿಂಗ್ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.15,000/– ನೀಡಲಾಗುತ್ತದೆ. ಮತ್ತು ಐಟಿಐ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.5,000/– ನೀಡಲಾಗುವುದು. ಈ ಆರ್ಥಿಕ ನೆರವು ವಿದ್ಯಾರ್ಥಿಗಳ ಕೋರ್ಸ ಮುಗಿಯುವವರೆಗೂ ನೀಡಲಾಗುವುದು.

2014 ರಲ್ಲಿ ಆರಂಭವಾದ ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿಯ ಕಾರ್ಯಕ್ರಮಗಳ ಅಡಿಯಲ್ಲಿ ಹೆಚ್‌ಎಲ್‌ಎಲ್, BPL ವರ್ಗಕ್ಕೆ ಸೇರಿದ ತಿರುವನಂತಪುರಂ, ಕೇರಳ ಮತ್ತು ಬೆಳಗಾವಿ ಜಿಲ್ಲೆ, ಕರ್ನಾಟಕದಲ್ಲಿ ವಿವಿಧ ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣಗಳನ್ನು ಪಡೆಯುತ್ತಿರುವ 321 ವಿದ್ಯಾರ್ಥಿಗಳಿಗೆ **1.27 ಕೋಟಿ** ಮೌಲ್ಯದ ಆರ್ಥಿಕ ನೆರವನ್ನು ನೀಡಿದೆ. ಹೆಚ್ ಎಲ್ ಎಲ್ ಉದ್ಯೋಗಿಗಳಿಂದ ಪ್ರಯೋಜಿತವಾದ ಪ್ರತೀಕ್ಷಾ ಚಾರಿಟೇಬಲ್ ಸೊಸೈಟಿಯು, ಪ್ರತೀಕ್ಷಾ ವೇದಿಕೆಯನ್ನು ಅನುಷ್ಠಾನಗೊಳಿಸಿದೆ. ಸೊಸೈಟಿಯ ನಿಧಿಯನ್ನು ನೌಕರರ ವೈಯಕ್ತಿಕ ಕೊಡುಗೆಗಳ ಮೂಲಕ ಮತ್ತು ಕಂಪನಿಯ CSR ನಿಧಿಯಿಂದ ಪಡೆಯಲಾಗುತ್ತದೆ.

ಹಿಂದಿನ ವರ್ಷಗಳಲ್ಲಿ ವಿದ್ಯಾರ್ಥಿವೇತನವನ್ನು ಪಡೆದ ವಿದ್ಯಾರ್ಥಿಗಳೊಂದಿಗೆ ಈ ವರ್ಷ 30ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುದಾನ ನೀಡಲಾಗುವುದು.

ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಆರ್ಥಿಕ ಹಿನ್ನೆಲೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಸಕ್ತಿದಾಯಕ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಮೂಲ ಆದಾಯದ ಪುರಾವೆಗಳನ್ನು, ಸಂಸ್ಥೆಯ ಮುಖ್ಯಸ್ಥರಿಂದ ಧೃಢೀಕರಿಸಲ್ಪಟ್ಟ ವ್ಯಾಸಂಗ ಪ್ರಮಾಣ ಪತ್ರಗಳನ್ನು ಮತ್ತು 10ನೇ ತರಗತಿ ಹಾಗೂ 12ನೇ ತರಗತಿಯ ಅಂಕಪಟ್ಟಿಗಳೊಂದಿಗೆ ಸಲ್ಲಿಸತಕ್ಕದ್ದು. ವಿದ್ಯಾರ್ಥಿವೇತನಕ್ಕಾಗಿ ಆಯ್ಕೆಯಾದ ಅಭ್ಯರ್ಥಿಗಳು, ಯೋಜನೆಯ ಲಾಭವನ್ನು ಪಡೆಯಲು ಪ್ರತಿ ವರ್ಷ ತಮ್ಮ ವಾರ್ಷಿಕ ಅಂಕಪಟ್ಟಿ ಅಥವಾ ಉತ್ತೀರ್ಣ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಅರ್ಜಿ ನಮೂನೆಗಳು ಹೆಚ್ ಎಲ್ ಎಲ್ ಲೈಫ್‌ಕೇರ್ ಲಿಮಿಟೆಡ್ ಕಛೇರಿಗಳಲ್ಲಿ ಪಡೆಯಬಹುದು ಅಥವಾ www.lifecarehll.com ನಿಂದ ಡೌನ್ಲೋಡ್ ಮಾಡಬಹುದು. ಅರ್ಜಿಗಳು **"ಡಿಜಿಎಮ್" (ಎಚ್‌ಆರ್),** ಹೆಚ್ ಎಲ್ ಎಲ್ ಲೈಫ್‌ಕೇರ್ ಲಿಮಿಟೆಡ್, ಕಣಗಲಾ ಫ್ಯಾಕ್ಟರಿ, ಹುಕ್ಕೇರಿ–ತಾಲೂಕಾ, ಬೆಳಗಾವಿ–ಜಿಲ್ಲಾ, ಕರ್ನಾಟಕ – 591225. ಇವರಿಗೆ 31 ಡಿಸೆಂಬರ್ 2025 ರ ಒಳಗೆ ಅಥವಾ ಮುಂಚಿತವಾಗಿ ತಲುಪುವಂತೆ ಕಳುಹಿಸತಕ್ಕದ್ದು.